# ವಾರ್ತಾ ವಿಶ್ಲೇಷಣೆ

## ಭಯೋತ್ಪಾದನೆ

**ದ್ವಿತೀಯಾದ್ವೈ ಭಯಂ ಭವತಿ** (ಎರಡನೆಯದರಿಂದಲೇ ಭಯವುಂಟಾಗುತ್ತವೆ) ಎಂದು ಉಪನಿಷತ್ತು ಹೇಳುತ್ತದೆ. ಎಲ್ಲ ಒಂದೇ ಆಗಿರುವಾಗ ಭಯಕ್ಕಾಗಲಿ ಬೇರೆ ಯಾವ ಭಾವವಿಕಾರಕ್ಕಾಗಲಿ ಅವಕಾಶವೇ ಇರುವುದಿಲ್ಲ. ಇಂದಿನ ದಿನಗಳಲ್ಲಿ ಭಯೋತ್ಪಾದನೆಯ ಬಗ್ಗೆ ನಾವು ಹೆಚ್ಚು ಕೇಳುತ್ತಿದ್ದೇವೆ. ಅದನ್ನು ಹೇಗಾದರೂ ಮಾಡಿ ದಮನ ಮಾಡಬೇಕೆಂದು ಜಗತ್ತಿನ ಎಲ್ಲ ದೇಶಗಳೂ ಪ್ರಾಮಾಣಿಕ ಅಥವಾ ಅಪ್ರಾಮಾಣಿಕ ಪ್ರಯತ್ನ ನಡೆಸುತ್ತಿವೆ. ಆದರೆ ಈ ಪ್ರಯತ್ನಗಳೆಲ್ಲವೂ ದಮನ ನೀತಿಯನ್ನು ಅನುಸರಿಸುತ್ತಿವೆ.ಇದರ ಜೊತೆಗೆ ಶಮನ ನೀತಿಯೂ ಅತ್ಯಂತ ಆವಶ್ಯಕ. ಶಮನ ನೀತಿಯೆಂದರೆ ಭಯೋತ್ಪಾದನೆಯ ಮೂಲ ಕಾರಣವನ್ನು ಕಂಡುಹಿಡಿದು ಅದನ್ನು ಶಾಂತಗೊಳಿಸುವುದು. ಭಯದಿಂದ ಭಯ ಹುಟ್ಟುತ್ತದೆ. ಒಂದು ಹುಲಿ ಮನುಷ್ಯನ ಮೇಲೆ ಎರಗುವುದು ಅವನ ಮೇಲಿನ ದ್ವೇಷದಿಂದಲ್ಲ, ಭಯದಿಂದ; ಹಾಗೆಯೇ ಒಂದು ಹಾವು ಕಚ್ಚುವುದೂ ಭಯದಿಂದ. ಇತರರು ತನ್ನ ಅಸ್ತಿತ್ವಕ್ಕೆ ಅಡಚಣೆಯಾಗಿದ್ದಾರೆ ಎಂಬ ಭಯವೇ ಇತರರನ್ನು ನಾಶಮಾಡುವ ಪ್ರವೃತ್ತಿಗೆ ಕಾರಣ. ಇಲ್ಲಿ ತನ್ನ ಅಸ್ತಿತ್ವವೆಂದರೆ ಕೇವಲ ದೈಹಿಕ ಅಸ್ತಿತ್ವವಲ್ಲ, ಜನಾಂಗ, ಧರ್ಮ, ಭಾಷೆ ಮುಂತಾದವುಗಳಿಗೂ ಇದು ಅನ್ವಯಿಸುತ್ತದೆ. ಒಂದು ಜನಾಂಗವಾಗಿ ನಾವು ಉಳಿಯಬೇಕು, ಒಂದು ಸಂಸ್ಕೃತಿಯಾಗಿ ನಾವು ಉಳಿಯಬೇಕು, ಒಂದು ಧಾರ್ಮಿಕ ಪಂಗಡವಾಗಿ ನಾವು ಉಳಿಯಬೇಕು ಎಂಬ ಬಯಕೆ ಎಲ್ಲರಲ್ಲೂ ಇರುತ್ತದೆ. ಇದಕ್ಕೆ ಧಕ್ಕೆ ಒದಗಿದಾಗ ಭಯೋತ್ಪಾದನೆ ಉಂಟಾಗುತ್ತದೆ. ಆದ್ದರಿಂದ ಸಾಂಸ್ಕೃತಿಕ ವೈವಿಧ್ಯವನ್ನು ನಾವು ಉಳಿಸಿಕೊಳ್ಳುವುದು ಅತ್ಯಂತ ಆವಶ್ಯಕ. ಜಾಗತೀಕರಣದ ಹೆಸರಿನಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ದಾಳಿಗಳೇ ಮೂಲಭೂತವಾದಕ್ಕೆ ಮತ್ತು ಅದರ ಪರಿಣಾಮವಾದ ಭಯೋತ್ಪಾದನೆಗೆ ಕಾರಣವೆಂದು ಅನೇಕ ಚಿಂತಕರು ಅಭಿಪ್ರಾಯಪಡುತ್ತಾರೆ.

ಆದರೆ ಕೆಲವು ಧಾರ್ಮಿಕ ಪಂಗಡದವರು ಇಡೀ ಜಗತ್ತು ಒಂದೇ ಧರ್ಮವನ್ನು ಅನುಸರಿಸುವಂತಾಗಬೇಕು ಎಂಬ ಹುಂಬತನದಿಂದ ತಮ್ಮ ಕಾರ್ಯಸಾಧನೆಗೆ ಭಯೋತ್ಪಾದನೆಯಂತಹ ಅಮಾನುಷ ಕೃತ್ಯಕ್ಕೂ ಹೇಸದಿರುವುದು ವಿಷಾದಕರ. ಇದೊಂದು ಹುಚ್ಚು ಪ್ರಯತ್ನ. ಯಾವುದೇ ಒಂದು ಧರ್ಮವನ್ನು ಇಡೀ ಮಾನವಕೋಟಿಗೆ ಅನ್ವಯಿಸಲಾಗುವುದಿಲ್ಲ. ಒಂದು ವೇಳೆ ಸಾಧ್ಯವಾದರೂ ಅದು ಬಹಳ ಕಾಲ ನಡೆಯುವುದಿಲ್ಲ. ಆ ಧರ್ಮವೂ ಬೇರೆ ಬೇರೆ ಪಂಗಡಗಳಾಗಿ ಒಡೆಯುತ್ತದೆ. ಮತ್ತೆ ಜಗಳ ಪ್ರಾರಂಭವಾಗುತ್ತದೆ.

ಯಾರನ್ನೂ ತನಗಿಂತ ಪರರು ಎಂದು ಭಾವಿಸದಿರುವುದು ಮುಖ್ಯ. ಈ ಪರತನವೇ ಎಲ್ಲ ಭಯಕ್ಕೂ, ಎಲ್ಲ ಹಿಂಸೆಗೂ ಕಾರಣ. ತನಗೆ ತಾನೇ ಪರಕೀಯನಾದಾಗ ಬೇರೆ ಎಲ್ಲರೂ ಪರಕೀಯರಾಗುತ್ತಾರೆ. ಮೊದಲು ಈ ಪರಕೀಯ ಭಾವನೆ ಹೋಗಬೇಕು. ಅದನ್ನು ಹೋಗಲಾಡಿಸುವ ಪ್ರಯತ್ನ ಮಾಡದೆ ಎಷ್ಟೇ ಬಾಂಬು ಚೆಲ್ಲಿದರೂ ಏನೂ ಆಗದು. ❖

## ಧಾರ್ಮಿಕ ವಿಕಾರ

"ಮಾನವ ಜನಾಂಗದ ಭವಿಷ್ಯವನ್ನು ರೂಪಿಸಲು ಇದುವರೆವಿಗೆ ತಮ್ಮ ಪ್ರಭಾವವನ್ನು ಬೀರಿದ ಮತ್ತು ಈಗಲೂ ಬೀರುತ್ತಿರುವ ಶಕ್ತಿಗಳಲ್ಲಿ ಧರ್ಮದಷ್ಟು ಪ್ರಬಲವಾದುದು ಮತ್ತಾವುದೂ ಇಲ್ಲ," ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಧರ್ಮವನ್ನು ನಿರ್ನಾಮ ಮಾಡಲು, ದೇವರನ್ನೇ ಇಲ್ಲವಾಗಿಸಲು ವಿಜ್ಞಾನ ಮತ್ತು ಆಧುನಿಕತೆ ಎಷ್ಟೇ ಪ್ರಯತ್ನ ಮಾಡಿದರೂ ಅದು ಒಂದಲ್ಲ ಒಂದು ರೂಪದಲ್ಲಿ ತಲೆದೋರುತ್ತದೆ. ಮನೋವಿಶ್ಲೇಷಣೆಯ (psycho-analysis) ಪ್ರಕಾರ ನಮ್ಮೊಳಗಿರುವ ಕಾಮವೇ ಮುಂತಾದ ಪ್ರವೃತ್ತಿಗಳನ್ನು ಅದುಮಿಡಲು (repression) ಪ್ರಯತ್ನಿಸಿದರೆ ಅವು ಬೇರೆ ವಿಕೃತ ರೂಪಗಳಲ್ಲಿ ವ್ಯಕ್ತವಾಗುವುವು. ಹಾಗೆಯೇ ಧರ್ಮವೂ ಮಾನವನ ಸ್ವಾಭಾವಿಕ ಪ್ರವೃತ್ತಿ. ಸೂಕ್ತರೂಪದಲ್ಲಿ ಅದಕ್ಕೆ ಅಭಿವ್ಯಕ್ತಿಯನ್ನು ನೀಡಬೇಕು. ಇಲ್ಲದಿದ್ದರೆ ಅದು ವಿಕೃತರೂಪದಲ್ಲಿ ವ್ಯಕ್ತವಾಗುತ್ತದೆ.

ಈಗ ಚೀನಾದಲ್ಲಿ ಒಂದು ಹೊಸ ಧಾರ್ಮಿಕ ಪಂಥವು ಪ್ರಾರಂಭವಾಗಿದೆಯಂತೆ. ಅದು ಕ್ರೈಸ್ತಧರ್ಮದ ಒಂದು ವಿಕೃತ ರೂಪ. ಅದರ ಹೆಸರು ಮಿಂಚು (Lightning). ಅದು ಈಗ ಭೂಗತವಾಗಿಯೇ ಮಿಂಚುತ್ತಿದೆ ಮತ್ತು ಮುಂದೆ ಆ "ಮಿಂಚು" ಪಶ್ಚಿಮ ದೇಶಗಳನ್ನೂ ತಾಕಬಹುದೆಂದು ನಿರೀಕ್ಷಿಸುತ್ತಿದ್ದಾರೆ. ಅದು ಕೇವಲ ಮಿಂಚಿ ಮಾಯವಾಗುವ ಮತವಲ್ಲ. ಅದರ ಅನುಯಾಯಿಗಳ ಪ್ರಕಾರ ಈಗಿರುವ ಯೇಸುಕ್ರಿಸ್ತನು ಹಳಬನಾಗಿದ್ದಾನೆ. ಅವನೇ ಈಗ ಹೊಸರೂಪದಲ್ಲಿ ಅವತರಿಸಿದ್ದಾನೆ—ಆದರೆ ಭಗವತ್ಪುತ್ರನಾಗಿ ಅಲ್ಲ, ಪುತ್ರಿಯಾಗಿ. ಆಕೆ ಇನ್ನೂ ಅಡಗಿಕೊಂಡೇ ಇದ್ದಾಳಂತೆ. ಮುಂದೆ ಸೂಕ್ತಕಾಲ ಬಂದಾಗ ಹೊರಗಡೆ ಕಾಣಿಸಿಕೊಂಡು ಮಹಾ ಕೆಂಪು ದೈತ್ಯಪ್ರಾಣಿಯನ್ನು (Great Red Dragon) ಅಂದರೆ ಚೀನಾವನ್ನು ನುಂಗುತ್ತಾಳಂತೆ. ಈ ಪಂಥ ಭೂಗತವಾಗಿ ಕೆಲಸ ಮಾಡುತ್ತಿದ್ದು ಸುಮಾರು ೩,೦೦,೦೦೦ ಅನುಯಾಯಿಗಳನ್ನು ಹೊಂದಿದೆ. ಅದು ಅಮಾಯಕ ವ್ಯಕ್ತಿಗಳನ್ನು ಕರೆದುಕೊಂಡು ಹೋಗಿ ಅವರ ತಲೆ ತಿರುಗಿಸಿ ತನ್ನೊಂದಿಗೆ ಸೇರಿಸಿಕೊಳ್ಳುತ್ತಿದೆ. ಈಗ ಈ ಪಂಥ ಚೀನಾದ ಕ್ರೈಸ್ತ ಧರ್ಮದವರಿಗೆ ಒಂದು ನುಂಗಲಾರದ ತುತ್ತಾಗಿದೆ. ಏಕೆಂದರೆ ಅದರ ಭಾವನೆಗಳು ಸಾಂಪ್ರದಾಯಿಕ ಕ್ರೈಸ್ತಧರ್ಮಕ್ಕೆ ವಿರುದ್ಧವಾಗಿದೆ. ಅದು ನಂಬುವ ಹೊಸ ಅವತಾರವಾದ ಆ ಮಹಿಳೆ ಬೈಬಲಿನ ಮೂರನೆ ಒಡಂಬಡಿಕೆಯನ್ನು ರಚಿಸಿದ್ದಾಳಂತೆ. ಅದು ಚೀನಾದಲ್ಲಿ ತಲೆ ಎತ್ತಿರುವ ಅತ್ಯಂತ ಉಗ್ರವಾದ ಕ್ರೈಸ್ತಪಂಥವೆಂದು ನಂಬಲಾಗಿದೆ.

ಜನರು ತಮ್ಮ ತಮ್ಮ ಧರ್ಮವನ್ನು ನಿಶ್ಚಿಂತೆಯಿಂದ ಅನುಸರಿಸಲು ಸಮಾಜದಲ್ಲಿ ಮುಕ್ತ ವಾತಾವರಣವಿರಬೇಕು. ಬಲವಂತ ಮತಾಂತರ, ಧರ್ಮಗಳ ಹುಟ್ಟಡಗಿಸುವ ಸರ್ಕಾರದ ನೀತಿ ಇತ್ಯಾದಿಗಳು ಧರ್ಮವು ವಿಕೃತರೂಪದಲ್ಲಿ ವ್ಯಕ್ತವಾಗುವುದಕ್ಕೆ ಕಾರಣವಾಗುತ್ತವೆ. ಮಾನವನಲ್ಲಿ ಅಂತರ್ಗತವಾಗಿರುವ ಧಾರ್ಮಿಕ ಪ್ರವೃತ್ತಿಗೆ ಗೌರವ ತೋರಿಸುವುದು ಅತ್ಯಂತ ಆವಶ್ಯಕ. ❖